done in Fisheries Department ? What papers has he published ?

Sri H. S. RUDRAPPA.—I will get the information separately and supply it to the Hon'ble Member.

ಶ್ರೀ ಕೆ. ಪುಟ್ಟಸ್ವಾಮಿ.—ನಮಗೆ ಒದಗಿಸಿರತಕ್ಕ ಕನ್ನಡ ಪ್ರಶ್ನೋತ್ತರದಲ್ಲಿ ಕನ್ನಡ ತರ್ಜುಮೆ ಯಾವ ಲೆಕ್ಕಚಾರದ ಮೇಲೆ ನಡೆಯುತ್ತಿದೆಯೋ ಅದು ಗೊತ್ತಾಗುತ್ತಿಲ್ಲ. ''ಮದ್ಯಾನ'' ''ಯುನಾಯಿಜೆಡ್ ಕಿಂಗ್‌ಡಾಮ'' ಎಂದು ಹೀಗೆಲ್ಲ ಬರೆದರೇನು ಇದು ? We are having translators. I wish they translate properly or use the very same English words.

Sale of Powerloom Silk and Cocoons through Regulated Markets.

Q.—1572. Smt. K. S. NAGARATHNAMMA (Gundlupet).—

Will the Government be pleased to state :—

(*a*) whether it is compulsory to sell Powerloom Silk only through regulated markets;

(*b*) whether there are facilities for disposal of cocoons also in the above manner ?

A.—Sri S. NIJALINGAPPA (Chief Minister).—

(*a*) Raw silk is excluded from the scope of Mysore Agricultural Produce Markets Act by a notification issued on 16th December 1957.

(*b*) Cocoons are also similarly exempt.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ತಾವು ರೇಷ್ಮೆ ಗೂಡುಗಳಿಗೆ ಕೊಟ್ಟಿರತಕ್ಕ ವಿನಾಯಿತಿಯೇ ನಿದೆ ಆ ಬಗ್ಗೆ ರೇಷ್ಮೆ ತಯಾರಿಸತಕ್ಕವರಿಗೂ (Producers) ಮತ್ತು ಬಳಸತಕ್ಕವರಿಗೂ (consumers) ಈ ಇಬ್ಬರಿಗೂ ಅನುಕೂಲವಿರುವಹಾಗೆ ಒಂದು ಬೇಸಿಕ್ ರೇಟನ್ನು ಫಿಕ್ಸ್ ಮಾಡುವುದಕ್ಕೆ ಅವಕಾಶವಿದೆಯೆ ?

*ಶ್ರೀ ಎಸ್. ನಿಜಲಿಂಗಪ್ಪ.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಆ ಬಗ್ಗೆ ಬೇರೆ ಪ್ರಶ್ನೆ ಕಳುಹಿಸಿದರೆ ಉತ್ತರ ಒದಗಿಸಲಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೇಷ್ಮೆ ಗೂಡುಗಳ ಮಾರಾಟದಲ್ಲಿ ಈ ವಿಚಾರ ಬರುತ್ತದೆಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ರೇಷ್ಮೆ ಗೂಡುಗಳನ್ನು ಮಾರಾಟ ಮಾಡಿದಮೇಲೆ ಈ ಪ್ರಶ್ನೆಯುದ್ಭವಿಸುತ್ತದೆ.

Construction of Bennitur Project.

Q.—1650. Sri K. KENCHAPPA (Hiriyur).—

Will the Government be pleased to state :—

(*a*) the estimated amount for the construction of the Bennitura Irrigation Project near Mahagaon village in Gulbarga taluk;

(*b*) when was this estimate prepared and when was it proposed to be taken up for construction;

(*c*) whether this project was sanctioned and included in the list of works to be executed;

(*d*) the extent of *achkat* to be irrigated and the number of villages that will be benefited if this work is completed ?

A.—Sri H. K. VEERANNA GOWDH (Minister for Public Works).—

(*a*) Rs. 138 lakhs.

(*b*) In 1954. It was proposed for inclusion in Second Five-Year Plan but it was found subsequently that it could not be included.

(*c*) No.

(*d*) (i) 20,000 acres.
(ii) 26 villages.

ಶ್ರೀ ಕೆ. ಕೆಂಚಪ್ಪ.—ಈ ಕೆರೆ ಕಟ್ಟಡದ ಬಗ್ಗೆ ಹೈದ್ರಾಬಾದ್ ಸರ್ಕಾರದವರು 1954ನೇ ಇಸವಿಗಿಂತ ಮುಂಚಿತವಾಗಿಯೇ ಒಂದು ಅಂದಾಜನ್ನು ತಯಾರಿಸಿದ್ದರಲ್ಲವೇ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು.

ಶ್ರೀ ಕೆ. ಕೆಂಚಪ್ಪ.—ಈ ಕೆರೆ ಕಟ್ಟಲು ಯಾವ ಸ್ಥಳವನ್ನು ನಿರ್ಧರಿಸಲಾಗಿತ್ತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ಥಳವನ್ನು ಮಹಗಾಂ ಗ್ರಾಮದ ಕೆಳಗಡೆಯಲ್ಲೆಲ್ಲೊ ಒಂದು ಕಡೆ ಗೊತ್ತುಮಾಡಿದ್ದರಂತೆ. ಆ ಕಾರ್ಯವನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಆಲೋಚನೆ ಇಟ್ಟುಕೊಂಡಿದ್ದರಂತೆ. ಆದರೆ ಅಷ್ಟರೊಳಗೆ ಆ ಪ್ರದೇಶ ವರ್ಗವಾಗಿ ಬೇರೆ ದೇಶಕ್ಕೆ ಸೇರಬೇಕಾಗಿ ಬಂತು. ಆದ್ದರಿಂದ ಆ ಸರ್ಕಾರದವರು ಇತ್ತೀಚೆಗೆ ಆ ವಿಚಾರವನ್ನೆಲ್ಲ ಕೈ ಬಿಟ್ಟರು. ಇತ್ತೀಚೆಗೆ ಆ ಪ್ರದೇಶ ನಮ್ಮ ಕೈಗೆ ಬಂದಿದೆ. ನಾವೀಗ ಆ ಬಗ್ಗೆ ರಿ-ಕ್ರಿಕನ್‌ಸಿಡರ್ ಮಾಡಬೇಕಾಗಿ ಬಂದಿದೆ. ಮುಂದಕ್ಕೆ ಇದರ ತೀರ್ಮಾನ ಯಾವ ರೀತಿ ಮಾಡಬೇಕೆಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಕೆ. ಕೆಂಚಪ್ಪ.—ಹೈದ್ರಾಬಾದಿನವರೇನೋ ಈ ವಿಚಾರ ಕೈ ಬಿಟ್ಟರು. ಆದರೆ ತಾವೇಕೆ ಈ ಕಾರ್ಯವನ್ನು ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಿಲ್ಲ ?